ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ರಾ.ಹೆ. -4, ಶಿಗ್ಗಾವಿ ತಾ., ಹಾವೇರಿ ಜಿಲ್ಲೆ – 581 205

# ಅಧಿಸೂಚನೆ

ಕ.ಜಾ.ವಿ.ವಿ./ಪ್ರ.ಅ/ಪಿಎಚ್.ಡಿ/2018-19/109 ದಿನಾಂಕ: 20.03.2019

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪಿಎಚ್.ಡಿ. ಕೋರ್ಸ್‌ಗಳಿಗೆ ಯುಜಿಸಿ ನಿಯಮಗಳಲ್ಲಿ ನಿಗದಿಪಡಿಸಿದ ಕನಿಷ್ಠ ಗುಣಮಟ್ಟದ ರೂಪುರೇಷೆಗಳಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಕೋರ್ಸ್‌ಗಳು | ವಿಷಯ |
|---|---|---|
| 1 | ಪಿಎಚ್.ಡಿ. | 1. ಜಾನಪದ ವಿಜ್ಞಾನ<br>2. ಜನಪದ ಸಾಹಿತ್ಯ<br>3. ಜನಪದ ಕಲೆ<br>4. ಗ್ರಾಮೀಣ ಮತ್ತು ಬುಡಕಟ್ಟು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ<br>5. ಪ್ರವಾಸೋದ್ಯಮ (ಎಂ.ಬಿ.ಎ.)<br>6. ಗ್ರಾಮೀಣ ಮತ್ತು ಬುಡಕಟ್ಟು ವ್ಯವಹಾರ ಹಾಗೂ ನಿರ್ವಹಣೆ (ಎಂ.ಬಿ.ಎ.)<br>7. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ<br>8. ಪಾರಂಪರಿಕ ಜ್ಞಾನ ಮತ್ತು ವಿಜ್ಞಾನ(ಎಂ.ಎಸ್ಸಿ)<br><br>**ಒಟ್ಟು ಖಾಲಿ ಸ್ಥಾನಗಳು : 50** |

**ಸೂಚನೆಗಳು:**

1. ಅನಿವಾಸಿ ಭಾರತೀಯ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶವನ್ನು ವಿಶ್ವವಿದ್ಯಾಲಯದ ನಿಯಮಗಳನುಸಾರ ಕಲ್ಪಿಸಲಾಗುವುದು.
2. **ಅರ್ಜಿ ಶುಲ್ಕ:** ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. 1000/- (ಒಂದು ಸಾವಿರ ರೂ. ಗಳು ಮಾತ್ರ), ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ರೂ. 750/- (ಏಳು ನೂರಾ ಐವತ್ತು ರೂ.ಗಳು ಮಾತ್ರ), ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-1 ರ ಅಭ್ಯರ್ಥಿಗಳಿಗೆ ರೂ. 500/- (ಐದು ನೂರು ರೂ.ಗಳು ಮಾತ್ರ) ಮತ್ತು ಹೊರರಾಜ್ಯದ ಅಭ್ಯರ್ಥಿಗಳಿಗೆ ರೂ. 2000/- (ಎರಡು ಸಾವಿರ ರೂ.ಗಳು ಮಾತ್ರ) ಗಳಾಗಿರುತ್ತದೆ. ಅರ್ಜಿ ಶುಲ್ಕದ ಮೊತ್ತವನ್ನು ಡಿ.ಡಿ. ರೂಪದಲ್ಲಿ **ಹಣಕಾಸು ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಇವರ ಪದನಾಮದಲ್ಲಿ **ಆಕ್ಸಿಸ್ ಬ್ಯಾಂಕ್, ಮಡ್ಲಿ ಕ್ರಾಸ್ ಶಾಖೆಗೆ** ಸಂದಾಯವಾಗುವಂತೆ ಪಡೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಶುಲ್ಕಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಜಾತಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
3. ಅರ್ಜಿಯನ್ನು ದಿನಾಂಕ: 20.03.2019 ರಿಂದ 10.04.2019 ರವರೆಗೆ ಪಡೆಯಬಹುದು.
4. ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು (ಮೌಲ್ಯಮಾಪನ) ಇವರಿಗೆ ದಿನಾಂಕ: 10.04.2019 ರೊಳಗಾಗಿ ಸಲ್ಲಿಸಬೇಕು.
5. ಯಾವುದೇ ಕೋರ್ಸ್‌ಗಳಿಗೆ ಅಗತ್ಯ ಸಂಖ್ಯೆಯ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಹಾಗೂ ಮಾರ್ಗದರ್ಶಕರ ಲಭ್ಯತೆಯನ್ನಾಧರಿಸಿ ಅಂತಹ ಕೋರ್ಸ್‌ಗಳನ್ನು ನಡೆಸುವುದರ ಬಗ್ಗೆ ವಿಶ್ವವಿದ್ಯಾಲಯದ ನಿರ್ಣಯವೇ ಅಂತಿಮ.
6. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಕಛೇರಿಗೆ ಭೇಟಿ ನೀಡಿ ವಿಚಾರಿಸಬಹುದು ಅಥವಾ ಕಛೇರಿ ದೂರವಾಣಿ ಸಂಖ್ಯೆ: 0836-2255180 ರ ಮೂಲಕ ಸಂಪರ್ಕಿಸಬಹುದು.

ಆದೇಶದ ಮೇರೆಗೆ,

21.3.2019

ಕುಲಸಚಿವರು(ಮೌಲ್ಯಮಾಪನ)